ಹೊರಗಿನ ಪ್ಲೈವುಡ್ ಪದರ ಕಿತ್ತು ಬರುತ್ತಿದ್ದಂತಾ ಬಾಗಿಲ ಬಳಿಯ ಬೆಲ್ ಒತ್ತಿದ ಕೀರ್ತಿಮಾನ್. ಬೆಲ್ ಹೊಡೆಯುವ ಮೊದಲೇ ಸರಕ್ಕನೆ ಬಾಗಿಲು ತೆರೆದುಕೊಂಡಿತು. ಸುಮಾರು ಐದೂವರೆ ಅಡಿ ಎತ್ತರದ ಮೇಕೆ ಗಡ್ಡವಿದ್ದು ಜೀನ್ಸ್ ಮತ್ತು  ಬಿಳಿ ಟೀ ಶರ್ಟ್ ಧರಿಸಿದ್ದ ಗಂಭೀರ ಮುಖದ ಯುವಕನೊಬ್ಬ ನಿಂತಿದ್ದವನು, ಇವನನ್ನು ಕಂಡೊಡನೆ ಹಲ್ಲು ಕಿಸಿದು, 'ಬನ್ನಿ ಸಾರ್, ಇನ್ಶೂರೆನ್ಸ್‌ನವರು ಅಲ್ಲವಾ?' ಎಂದು ದಾರಿ ಬಿಟ್ಟನು. ನೀನು ರಾಜೂನಾ ಎಂದು ಕೇಳುವ ಅವಶ್ಯಕತೆಯಿರಲಿಲ್ಲ. ಅವನು ಆಗಲೇ ಆತಂಕದಿಂದ ಒಳರೂಮಿನತ್ತ ನೋಡುತ್ತಿದ್ದನು, ಕಂಚಿಯನ್ನು ಎಬ್ಬಿಸಿ ಬಿಡೋಣವೆಂದು!

'ಅವಸರ ಬೇಡಾ, ಕೂತ್ಕೋ' ಎಂದು ಅಲ್ಲಿದ್ದ ಹೊಸ ಚೇರಿನ ಮೇಲೆ ಕೂತು ಅವನನ್ನೂ ಕೂರಿಸಿಕೊಂಡ ಕೀರ್ತಿಮಾನ್. ಆ ಮನೆಯ ಒಳಭಾಗವನ್ನು ಗಮನಿಸಿದರೆ: ಹೊಸ ಹೊಸ ಫರ್ನೀಚರ್, ಕರ್ಟನ್ಸ್, ಕಾರ್ಪೆಟ್ ಖರೀದಿಸಿದಂತಿದೆ. ಹೊರಭಾಗ ಬಿಲ್ಡಿಂಗಿನವರದು ಅದಕ್ಕೇ ದುರವಸ್ಥೆಯಲ್ಲಿದೆ. ಆದರೆ ಕಂಚಿಯ ಸಂಪಾದನೆಯ ಸಿಂಹಪಾಲು ಈ ಮನೆಯ ಇನ್ಟೀರಿಯರ್ಸ್ ಸಿಂಗಾರಕ್ಕೇ ಖರ್ಚಾಗಿದೆಯೆನಿಸಿತು. ಅವಳಿಗೆ ಇಂತಾ ಆದಾಯವಿದೆಯೆ? ಎನಿಸಿತು ಕೀರ್ತಿಮಾನನಿಗೆ.

'ನಿನ್ನನ್ನು ಕೆಲವು ಪ್ರಶ್ನೆಗಳು ಕೇಳುವುದಿದೆ ಏನೂ?' ಎಂದು ರಾಜೂಗೆ ಪೀಠಿಕೆ ಹಾಕಿದ ಪತ್ತೇದಾರ.

ಹುಮ್ಮಸ್ಸಿನಿಂದ ತಲೆಯಾಡಿಸುತ್ತಾ ರಾಜೂ,'ಓಹ್, ಅದಕ್ಕೇನಂತೆ, ಕೇಳಿ ಹಾಗಾದ್ರೆ ಕಂಚೀನಾ ಜಾಸ್ತಿ ಡಿಸ್ಟರ್ಬ್ ಮಾಡುವುದು ಬೇಡಾ ಅನ್ನಿಸತ್ತೆ' ಎಂಬ ತರ್ಕವಿಟ್ಟ ತನಗೇನೂ ಇಂದು ಡಿಸ್ಟರ್ಬ್ ಆಗಿಲ್ಲವೆಂಬಂತೆ!.

'ಎಷ್ಟು ವರ್ಷದಿಂದ ಕಂಚನಾ ನಿನಗೆ ಗೊತ್ತು?' ಎಂದು ಶುರು ಮಾಡಿದ ಅವನ ಚರ್ಯೆಯನ್ನೇ ಗಮನಿಸುತ್ತಾ.

'ನಾಲ್ಕು ವರ್ಷದಿಂದ. ಅವಳು ಈ ಊರಿಗೆ ಬಂದಾಗಿನಿಂದ ನಾನೇ ಅವಳ ಏಜೆಂಟ್ ಆಗಿ ಡ್ರಾಮ ತಂಡಕ್ಕೆ ಪರಿಚಯ ಮಾಡಿಸಿದ್ದು...' ಎಂದ ಹೆಮ್ಮೆಯಿಂದ ಬೀಗುವ ಭಾವ ತೋರಿಸುತ್ತಾ.

ಇವನೇ ಯಾಕೆ ಸೇರಲಿಲ್ಲವೋ? ಅನಿಸಿತು ಕೀರ್ತಿಮಾನ್‌ಗೆ.

'ಅಕ್ಕ ಅಂಚನಾ ಕೂಡಾ ಈ ಊರಿಗೆ ಒಟ್ಟಿಗೆ ಬಂದಿದ್ದಳೇ?' ಅದು ಕೀರ್ತಿಮಾನ್‌ಗೆ ತಿಳಿಯಲೇ ಬೇಕಾದ ಮಾಹಿತಿ. 'ಆಹ್..ನನಗೆ ತಿಳಿದ ಮಟ್ಟಿಗೆ ಹೌದು..' ಎಂದು ಕಿಟಕಿಯ ಹೊರಗೆ ಆಗಸ ದಿಟ್ಟಿಸಿದ, ಅಲ್ಲಿ ಉತ್ತರ ಹುಡುಕುವವನಂತೆ.

'ಅಂಚನಾ ಮೇಡಮ್ ಮೊದಲೇ ಈ ಊರಿನಲ್ಲಿ ಮಾಡೆಲಿಂಗ್ ಮಾಡುತ್ತಿದ್ದರು ಅಂತಾ ಜ್ಞಾಪಕ. ನನಗೆ ಮೊದಲು ಕಂಚಿ ಸಿಕ್ಕಿದಾಗ ಅವಳೇ ಅಂಚನಾ ಅಂತಾ ಕನ್ಫ್ಯೂಸ್ ಆಗಿಬಿಟ್ಟೆ' ಎಂದ. ಅವರ ಸಾಮ್ಯವನ್ನು ಮತ್ತೆ ಒತ್ತಿ ಹೇಳುವಂತೆ,

'ಮತ್ತೆ ಅವರಿಬ್ಬರನ್ನೂ ಪ್ರತ್ಯೇಕವಾಗಿ ಗುರುತಿಸುವ ಬಗೆ ಹೇಗೆ..?' ಕೀರ್ತಿಮಾನ್‌ನ ಮೊನಚಾದ ಪ್ರಶ್ನೆ.

'ಆಹ್' ಎಂದು ಜಾಣತನದಿಂದ ತಲೆಯಾಡಿಸಿದ ತನಗೆ ಈ ರಹಸ್ಯ ಗೊತ್ತೆಂಬಂತೆ 'ಒಬ್ಬಳು ಇನ್ನೊಬ್ಬಳನ್ನ ಅಂಚೀ ಅಥವಾ ಕಂಚೀ ಅಂತ ಕರೆಯುತ್ತಿದ್ದರಲ್ಲ. ಆಗ ಕ್ಲಿಯರಾಗಿ ಗೊತ್ತಾಗಿ ಬಿಡೋದು.'


ನಿಜಕ್ಕೂ ಡ್ರಾಮಾ ಚೆನ್ನಾಗಿ ಮಾಡುತ್ತಾನೆ ಎನಿಸಿತು ಕೀರ್ತಿಮಾನನಿಗೆ.

'ಒಬ್ಬೊಬ್ಬರೇ ಇದ್ದರೆ?' ಎಂದ ಕೀರ್ತಿಮಾನ್ ತಾಳ್ಮೆಯನ್ನು ಕಳೆದುಕೊಳ್ಳದೇ,

## ಕಾಮನ ಬಿಲ್ಲು

ಬಿಸಿಲು ಮಳೆಯ
ಸಂಗಮದಿಂದ
ಹುಟ್ಟಿದ ಮುದ್ದಿನ
ಕೂಸು

★ ಎ.ಎಸ್. ಹೂಲಗೇರಿ



'ನನ್ನ ಜತೆ ಯಾವಾಗಲೂ ಕಂಚೀನೆ ಇರ್ತಿದ್ದಿದ್ದು ಡ್ರಾಮಾ ಟ್ರೂಪ್ ಜತೆ. ಅಂಚನಾ ಮೇಡಮ್ ಅವಳನ್ನ ನೋಡಕ್ಕೆ ಬಂದೂ ಹೋಗಿ ಮಾಡ್ತಿದ್ರು, ಆವಾಗ ಯಾರ್‍ಯಾರು ಅಂತಾ ಗೊತ್ತಾಗ ಬಿಡೋದು' ಎಂದು ಹಲ್ಲು ಕಿಸಿದ ರಾಜೂ.

'ರಾಜೂ..!' ಎಂದು ಕೀರ್ತಿಮಾನ್ ಗದರುತ್ತಿದ್ದಂತೆಯೆ, ಸಹನೆ ಕಳೆದುಕೊಳ್ಳಬಾರದೆಂಬಂತೆ ರಾಜೂ ಕೈ ಎತ್ತಿದ.

'ಹೇಳ್ತೀನಿ ಸಾರ್, ಟ್ವಿನ್ಸ್ ಅಲ್ಲವಾ, ಅವರಿಬ್ಬರ ಬ್ಲಡ್ ಗ್ರೂಪ್ ಕೂಡಾ ಒಂದೇ ಇರುತ್ತಂತೆ. ಆದರೆ ಒಂದೇ ಒಂದು ವ್ಯತ್ಯಾಸ ಇದೆಯಂತೆ. ಅದು ನಂಗೊತ್ತು..' ಎಂದು ಕಿವಿಯ ಹತ್ತಿರ ಸರಿದು ರಹಸ್ಯವನ್ನು ಪಿಸುಗುಟ್ಟಿದ.

'ಅಂಚನಾ ಮೇಡಮ್ ಅವರ ಬಲ ತೊಡೆಯಲ್ಲಿ ಒಂದು ಹುಟ್ಟು ಮಚ್ಚೆಯಿದೆಯಂತೆ. ಕಂಚಿಗೆ ಇಲ್ಲವಂತೆ. ಅಂಚನಾ ತಮ್ಮ ಪಾಲಿಸಿಯಲ್ಲಿ ಈ ಮಾಹಿತಿ ಬರೆಸಿದ್ದಾರೆ' ಎಂದು ಉಸುರಿ ಈ ಸುದ್ದಿ ಹೇಳಿದ್ದರಿಂದ ಮುಖ ನಾಚಿ ಕೆಂಪಾದಂತೆ ಕಂಡ ರಾಜೂ.

ಕೀರ್ತಿಮಾನ್ ಅವನನ್ನು ಮಾತಿಲ್ಲದೆ ಅರ್ಥಗರ್ಭಿತವಾಗಿ ದಿಟ್ಟಿಸಿ ನೋಡಿದಾಗ, ರಾಜೂ ಜೋರಾಗಿ ತಲೆ ಒದರಿದ, 'ಅಯ್ಯೋ ರಾಮಾ, ನಂಗೊತ್ತು ಅಂದರೆ ನಾನು ಇದನ್ನು ಕಣ್ಣಾರೆ ನೋಡಿಲ್ಲ ಸ್ವಾಮೀ, ನನ್ನನ್ನು ಆ ರೀತಿ ನೋಡಬೇಡಿ' ಎಂದು ಮುಜುಗರಪಡುತ್ತಾ ರಾಜೂ 'ನಾನು ಅಂಚನಾ ಪಾಲಿಸಿ ಮಾಡಿಸಿದಾಗ ಒಂದು ವಿಟ್ನೆಸ್ ಸೈನ್ ಹಾಕುವಾಗ ಈ ಮಾತು ಬಂತು, ಹೇಳಿದೆ ಅಷ್ಟೇ. ಶರಭ್ ಕೂಡಾ ಇದನ್ನು ಬಾಯಿಮಾತಿನ ಮೇಲೆಯೇ ಒಪ್ಪಿದ್ದರಂತೆ. ಅದನ್ನೆಲ್ಲಾ ಬೇಕಾದರೆ ನೀವು ಈಗ ಅವರ ಹೆಣ ಪರೀಕ್ಷೆ ಮಾಡುವವರ ಬಳಿ ತಿಳಿದುಕೊಳ್ಳಬಹುದು' ಎಂದು ಮಹಾ ಜಾಣನಂತೆ ಸಲಹೆ ನೀಡಿದ ರಾಜೂ.

ಅಷ್ಟೊತ್ತಿಗೆ ಸರಿಯಾಗಿ ಒಳಬಾಗಿಲು ತೆಗೆದು ಕಂಚಿ ಹೊರಬಂದಳು.

ಅವಾಕ್ಕಾಗುವಂಥ ಪಡಿಯುಚ್ಚಿನ ಸುಂದರಿ! ಸರಳವಾದ ಕೆಂಪು ಹೌಸ್ ಗೌನ್ ಧರಿಸಿ ನಿರಾಭರಣೆ ಆಗಿದ್ದಾಳೆ. ಅತ್ತು ಕೆಂಪಾಗಿ ದುಃಖತಪ್ತವಾಗಿರುವ ಮುಖ, ತಲೆಕೂದಲು ಕೆದರಿಕೊಂಡು, ಮಲಗಿದ್ದವಳು ಎದ್ದು ಬಂದಂತಿದೆ.

'ಸದ್ದು ಕೇಳಿಸಿತು, ಎದ್ದು ಬಂದೆ..' ಎಂದು ಅಲ್ಲಿದ್ದ ಮೂರನೇ ಕುರ್ಚಿಯಲ್ಲಿ ಕುಳಿತು, ಕೀರ್ತಿಮಾನ್ ಕಡೆಗೆ ತಿರುಗಿ, 'ನೀವು ಯಾರು ಅಂತಾ ಗೊತ್ತಾಗಲಿಲ್ಲ' ಎಂದು ಕ್ಷೀಣ ದನಿಯಲ್ಲಿ ನುಡಿದು ನಿಟ್ಟುಸಿರಿಟ್ಟಳು ಕಂಚಿ.

ರಾಜೂ ತಾನೇ ಮುಂದಾಗಿ, 'ಇವರೇ ಅಕ್ಕನ ಇನ್ಶೂರೆನ್ಸ್ ಕಂಪನಿಯ ಆಫೀಸರ್ ಕೀರ್ತಿಮಾನ್ ಅಂತ ಬರ್ತಾರೆ ಅಂತಾ ನಾನು ಮೊದಲೇ ಹೇಳಿರಲಿಲ್ವೆ?' ಎಂದು ವಿವರಿಸಿದ.

'ಓಹ್. ಅದು ಬೇರೆ ಇದೆಯಲ್ಲಾ, ಬೇಡಾ ಅಂದರೂ' ಎಂದು ಸಪ್ಪಗೆ ನಕ್ಕಳು, ತನಗದು ಈಗ ಅಪ್ರಿಯ ವಿಷಯವೆಂಬಂತೆ.

ಕೀರ್ತಿಮಾನ್ ಆಕೆ ಕೊಟ್ಟ ಬಲಗೈಯನ್ನು ಕುಲುಕಿದ.. ತಣ್ಣಗೆ ವೀಕಾದಂತಿದೆ ಕೈ.

'ನೋಡಿ, ಕಂಚಿ ನಾನು ಆಫೀಸರ್ ಎಲ್ಲಾ ಏನೂ ಅಲ್ಲಾ. ಈಗಿನ್ನೂ ಈ ಕೇಸಿನ ತನಿಖೆ ಮಾಡಲು ನನಗೆ ಹೇಳಿದ್ದಾರೆ. ನಿಮ್ಮ ಅಕ್ಕನ ಸಾವು ಸಂಶಯಾಸ್ಪದವಾದ ರೀತಿಯಲ್ಲಿ ಆಗಿರುವುದರಿಂದ ಇದರ ಪೊಲೀಸ್ ತನಿಖೆ ಎಲ್ಲಾ ಮುಗಿಯುವವರೆಗೂ ನಿಮ್ಮ ಕ್ಲೈಮ್ಸ್ ನೆಲ್ಲಾ..' ಕೀರ್ತಿಮಾನ್ ಎನ್ನುತ್ತಿರುವಂತೆಯೇ ಆಕೆಯೇ ಮಧ್ಯಪ್ರವೇಶ ಮಾಡಿ ತಡೆದು,

'ಅಯ್ಯೋ, ಅಕ್ಕನೇ ಇಲ್ಲ..ಇನ್ನು ಆ ದುರದೃಷ್ಟ ಹಣ ಯಾತಕ್ಕಾಗಿ? ನಾವೇನೂ ಅದೆಲ್ಲಾ ಇನ್ನೂ ಯೋಚಿಸಿಲ್ಲಾ'  ಎಂದು ಆ  ವಿಚಾರವನ್ನು ತಳ್ಳಿಹಾಕುವಂತೆ ನುಡಿದಳು ಕಂಚಿ.

ರಾಜೂ ಚಹರೆ ಹೈರಾಣವಾದಂತೆನಿಸಿತು, 'ಅರೆರೆ ಹಾಗಂದರೆ ಹೇಗೆ ಕಂಚಿ? ಅಕ್ಕ ಪ್ರೀತಿಯಿಂದ ನಿನಗಾಗಿ ಬಿಟ್ಟು ಹೋದ ಕಾಣಿಕೆಯಲ್ಲವೆ? ಅವರ ಆತ್ಮಕ್ಕೆ ಶಾಂತಿ ಬೇಡವೆ? ಇಷ್ಟಕ್ಕೂ ಭಾವ ಶಶಿಧರ್ ಸುಮ್ಮನಿರುತ್ತಾರೆಯೆ?' ಎಂದು ಆಕೆಯ ಮನವೊಲೈಸುವಂತೆ ಶುರು ಮಾಡಿದ.

ಕೀರ್ತಿಮಾನ್ ಗಮನವಿಟ್ಟು ಕಂಚಿಯ ಮುಖಭಾವವನ್ನು ನಿರುಕಿಸಿದ.

ಆಕೆ ಹುಬ್ಬುಗಂಟಿಕ್ಕಿ ಅರ್ಧ ರಾಜೂಗೆ, ಅರ್ಧ ಕೀರ್ತಿಮಾನನಿಗೆ ಎನ್ನುವಂತೆ ವಿವರಿಸತೊಡಗಿದಳು.

'ಓಹ್, ರಾಜೂ.. ನಮಗೆ ಅಕ್ಕನ ಸಾವಿಗಿಂತಾ ಈ ಹಣ ಬಹಳ ಮುಖ್ಯವೇ? ನನಗೆ ತುಂಬಾ ಶಾಕ್ ಆಗಿದೆ. ಈಗ ಈ ಇನ್ಶೂರೆನ್ಸ್ ಕ್ಲೈಮ್ ಹಾಕುವುದು ಇದೆಲ್ಲ ಅವಸರವಿಲ್ಲ, ಆಸಕ್ತಿಯೂ ಇಲ್ಲ. ಅಷ್ಟಕ್ಕೂ ನಮ್ಮ ಈ ಚಿಕ್ಕ ಜೀವನದಲ್ಲಿ ನಾವು ಸಂತುಷ್ಟರಿದ್ದೀವಲ್ಲಾ?' ಎಂದಳು.

ರಾಜೂ ಬಾಯಿ ಬಿಟ್ಟು ವಾದಿಸಲು ಹೊರಟು ತಕ್ಷಣ ತಿದ್ದಿಕೊಂಡವನಂತೆ 'ಅದೂ ಭಾವ ಮತ್ತೆ ಏನೂ..' ಎಂದು ತೊದಲಿ ಸುಮ್ಮನಾದ. 'ಇಬ್ಬರೂ ಚೆನ್ನಾಗಿ ಅಭಿನಯಿಸುತ್ತಾರೆ, ಡ್ರಾಮಾ ಕಂಪನಿಯವರಲ್ಲವೆ?' ಎನಿಸಿತು ಪತ್ತೇದಾರನ ಅನುಭವೀ ಕಂಗಳಿಗೆ.

ಕೀರ್ತಿಮಾನ್ ಮುಂದುವರೆಸುತ್ತಾ, 'ಕಂಚೀ, ನಿನ್ನೆ ನಿಮ್ಮಿಬ್ಬರಿಗೂ ಹುಟ್ಟಿದ ಹಬ್ಬ. ಆದರೂ ಯಾಕೆ ಅಂಚನಾ ಕರೆದ ಬರ್ತ್‌ಡೇ ಪಾರ್ಟೀಗೆ ಹೋಗಲಿಲ್ಲ. ಎಲ್ಲಿದ್ದಿರಿ..ಹೇಳುತ್ತೀರಾ..?' ಎಂದು ಕೇಳಿದ.

ಅವಳು ಕರ್ಚೀಫಿನಲ್ಲಿ ಕಣ್ಣು ಮೂಗಿನಲ್ಲಿ ಸುರಿದ ನೀರೊರೆಸಿಕೊಂಡಳು.

'ಇದೆಲ್ಲಾ ಆಗಲೇ ಆ ಪೊಲೀಸಿನವರಿಗೆ ಹೇಳಿಯಾಗಿದೆ' ಎಂದು ಕ್ಷೀಣ ದನಿಯಲ್ಲಿ ಆಕ್ಷೇಪಿಸಿದರೂ, ಅವನ ದೃಢ ಚರ್ಯೆಯನ್ನು ಗಮನಿಸಿ ನುಡಿದಳು. 'ಅದೇ ನಮ್ಮ ಹಳೇ ಡ್ರಾಮ. ಕಿತ್ತೂರು ಚೆನ್ನಮ್ಮ ಅನ್ನು ಸ್ವಲ್ಪ ಸ್ಪೆಷಲ್ ಎಫೆಕ್ಟ್ಸ್ ಹಾಕಿ ಮತ್ತೆ ಮಾಡುತ್ತಿದ್ದೇವೆ. ಅದಕ್ಕೆ ನಮ್ಮ ಡೈರೆಕ್ಟರ್ ಅವಸರ ಮಾಡಿದ್ರು, ರಿಹರ್ಸಲ್‌ಗಾಗಿ ಹೊಸ ಸ್ಟುಡಿಯೋ ಹಾಲ್ ಇದೆ. ಇಲ್ಲಿಂದ ಹತ್ತು ಕಿಮೀ ದೂರ ಅಷ್ಟೇ. ಆದರೆ ಅಕ್ಕನ ಮನೆಯಿಂದ ಇಪ್ಪತ್ತು ಕಿಮೀ ದೂರ ಆಗತ್ತೆ. ಅಲ್ಲಿ ನನಗೆ ಲೇಟಾಯಿತು. ರಾಣಿಯ ಮೇಕಪ್ ಬೇರೆ ಹಾಕಿದ್ದೆ. ಮಧ್ಯೆ ಬಿಡಿಸ್ಕೊಂಡು ಬರಲೂ ಆಗಲಿಲ್ಲ. ಅದಕ್ಕೆ ರಾಜೂಗೆ ಫೋನ್ ಮಾಡಿ ಬಿಟ್ಟೆ, ನೀನೇ ಹೋಗಿ ಬಾ ಎಂದು' ಕಂಚಿಯ ಮುಖದಲ್ಲಿ ವಿಲಕ್ಷಣ ನೆಮ್ಮದಿ ಹಾದು ಹೋಯಿತು. 'ಹಾಗೆ ನೋಡಿದರೆ ಬರದಿದ್ದದ್ದೇ ಒಳ್ಳೆಯದಾಯ್ತಲ್ಲಾ. ಯಾಕೆ ನಮ್ಮಿಬ್ಬರ ಬರ್ತ್‌ಡೇ ದಿನಾ ಅವಳು ಸತ್ತಿದ್ದು ನೋಡಿ ನಾನೂ ಸಾಯುತ್ತಿದ್ದೆನೋ ಏನೋ?' ಎಂದು ಮುಖವನ್ನು ಕರ್ಚೀಫ್‌ನಲ್ಲಿ ಹುದುಗಿಸಿ ಬಿಕ್ಕಿದಳು ಕಂಚಿ.

'ಏ..ಹೀಗೆ ಅಳುತ್ತಾ ಕೂತರೆ ಹೇಗೆ, ಇನ್ನೂ ಅಕ್ಕನ್ನ ಮಣ್ಣು ಮಾಡಬೇಕು, ಪಾಲಿಸಿ ಕ್ಲೈಮ್ ಮಾಡಬೇಕು' ಎಂದು ಮತ್ತೂ ಸಂತೈಸಲು ಹೋದ ರಾಜೂ.

ಕೀರ್ತಿಮಾನ್ ಮನದಲ್ಲಿ ಕಂಚಿ ನಿಜಕ್ಕೂ ಶಾಕ್ ಆದವಳು ಇಲ್ಲವೆ ಅತ್ಯುತ್ತಮ ನಟಿ ಎರಡರಲ್ಲಿ ಒಂದು ಎಂಬ ತೀರ್ಮಾನ ಮೂಡುತ್ತಿದೆ. ಆದರೆ ರಾಜೂ ಮಾತ್ರ ಧನದಾಹಿ ಹುಳ, ಅವನಿಗೆ ಕಂಚಿಯ ಭಾವನೆಗಳು ಅರ್ಥವಾಗುತ್ತಿಲ್ಲ ಎನಿಸಿತು.

ತಾನೇ ಮಾತು ಮುಂದುವರೆಸುತ್ತಾ, ಕೀರ್ತಿಮಾನ್, 'ಅದನ್ನೇ ಹೇಳಲು ಬಂದೆ. ನೀವೀಗ ಕ್ಲೈಮ್ ಮಾಡ ಹೊರಟರೂ ಈ ಕೇಸ್ ತನಿಖೆಯೆಲ್ಲ ಮುಗಿದು ನಮಗೆ ಪೋಲಿಸರಿಂದ ಕ್ಲಿಯರೆನ್ಸ್ ಸಿಗುವವರೆಗೂ ಹಣ ಪಾವತಿಯನ್ನು ತಡೆದಿರುತ್ತೇವೆ. ಅನಂತರ ಪಾಲಿಸಿಯ ನಿಯಮದ ಪ್ರಕಾರ ನಿಮ್ಮ ಹಣ ಸಂದಾಯ ಆಗುವಂತಿದ್ದರೆ ನಿಮಗೆ ಸಿಗುವುದು' ಎಂದನು.

ಕಂಚಿ ನಿರ್ಲಿಪ್ತಳಾಗಿ ಕುಳಿತು ತನಗಿದು ಸಂಬಂಧವಿಲ್ಲವೆಂಬಂತೆ ತಲೆಯಾಡಿಸಿದಳು.

ಕೀರ್ತಿಮಾನ್ ಆಕೆಯನ್ನುದ್ದೇಶಿಸಿ, 'ನೋಡಿ ಕಂಚಿ, ನಿಮ್ಮ ಅಕ್ಕ ಮತ್ತು ನಿಮ್ಮ ಬಗೆಗಿನ ಹಲವು ವಿಚಾರಗಳು ನನಗೆ ತಿಳಿಯುವುದಿದೆ. ಹೇಗೂ ಪೊಲೀಸ್ ಇದರ ಬಗ್ಗೆ ನಿಮ್ಮನ್ನು ಖಂಡಿತಾ ಕೇಳುತ್ತಾರೆ. ನನಗೂ ತಿಳಿಯಬೇಕಿತ್ತು. ನಿಮಗೆ ತ್ರಾಸವಾಗುವುದಿಲ್ಲವೆಂದರೆ ಈಗಲೇ ಕೇಳುತ್ತೇನೆ, ಇಲ್ಲವೇ ಆನಂತರ ಬರುತ್ತೇನೆ' ಎಂದ.

'ಇಲ್ಲಾ ಇರಿ, ಟೀ ತರುತ್ತೇನೆ' ಎಂದು ರಾಜೂ ಒಳಹೋದ.

ಕಂಚಿ ತನ್ನ ನಿಸ್ತೇಜ ಮುಖದಲ್ಲಿ ಕೈಯಾಡಿಸಿಕೊಂಡು ಕೂದಲನ್ನು ಹಿಂದೆ ಗಂಟು ಕಟ್ಟಿಕೊಳ್ಳುತ್ತಾ ನುಡಿದಳು: 'ಹೇಗೂ ಅಕ್ಕನ ಮರಣದ ದುಃಖ ಮನಸ್ಸನ್ನು ಬಿಡದು. ಸುಮ್ಮನೆ ಒಬ್ಬಳೇ ಯೋಚಿಸುತ್ತಾ ಮಲಗಿರುವ ಬದಲು, ಆ ಬಗ್ಗೆ ಮಾತಾಡಿದರೇ ಹಗುರುವಾಗುತ್ತೇನೋ?..ಸುಮ್ಮನೆ ನಿಮಗೇಕೆ ಮತ್ತೆ ಬರುವ ಕಷ್ಟ? ಕೇಳಿ' ಎಂದಳು.

'ನಿಮ್ಮಿಬ್ಬರ ಬಾಲ್ಯ ಮತ್ತು ಇಲ್ಲಿಗೆ ಬರುವ ಮುಂಚಿನ ದಿನಗಳ ಬಗ್ಗೆ ಹೇಳಿ' ಎಂದು ಆರಂಭಿಸಿದ ಪತ್ತೇದಾರ.

ಮುಖ ಹುಳ್ಳಗೆ ಮಾಡಿಕೊಂಡು ನಕ್ಕಳು ಕಂಚಿ, 'ನಾನಂದುಕೊಂಡೆ, ನೀವಿದನ್ನು ಕೇಳಿಯೇ ಕೇಳುತ್ತೀರಿ ಎಂದು. ಇರಲಿ, ನಮ್ಮಿಬ್ಬರದೇನೂ ಅಂತಾ ಹೇಳಿಕೊಳ್ಳುವಂತಾ ಬಾಲ್ಯವಲ್ಲ. ಅಪ್ಪನನ್ನು ನಾವು ನೋಡಿಯೇ ಇಲ್ಲ. ನಮಗೆ ಬುದ್ಧಿ ತಿಳಿದಾಗಿನಿಂದ ಅಮ್ಮ ಊರೂರು ಸುತ್ತುವ ನಾಟಕ ಮಂಡಲಿಯಲ್ಲಿ ಚಿಕ್ಕ ಪುಟ್ಟ ಪಾತ್ರ ಮಾಡುತ್ತಿದ್ದಳು. ನಾವಿಬ್ಬರೇ ಮಕ್ಕಳು..ಬಡತನ, ನೋಡಲು ಒಂದೇ ತರದ ಅವಳಿಗಳು ಎಂದು ನಾಟಕದವರೂ ನಮ್ಮನ್ನು ಚಿಕ್ಕ ವಯಸ್ಸಿನಿಂದಲೇ ತಮ್ಮ ಶೋಗಳಲ್ಲಿ ಮಧ್ಯೆ ಮಧ್ಯೆ ವಿಚಿತ್ರ ಡ್ರೆಸ್ ಹಾಕಿಸಿ ಕುಣಿಸಿ, ಹಾಸ್ಯ ದೃಶ್ಯಗಳನ್ನು ಕೊಟ್ಟು ಜನರನ್ನು ರಂಜಿಸಲು ಬಳಸುತ್ತಿದ್ದರು. ನಾವು  ಸ್ಕೂಲ್‌ಗೆ ಅಂತ ಕ್ಲುಪ್ತವಾಗಿ ಹೋಗಕ್ಕಾಗುತ್ತಿರಲಿಲ್ಲ. ಓದಿ ಬರೆಯಲು ಕಲಿತೆವು ಅಷ್ಟೇ. ಅಮ್ಮನ ಗೆಳತಿಯೊಬ್ಬಳು ಡ್ಯಾನ್ಸ್ ಡ್ರಾಮ ಶಾಲೆ ನಡೆಸುತ್ತಿದ್ದರು. ತೆರೇಸಮ್ಮ ಅಂತಾ ಆ ಕ್ರಿಶ್ಚಿಯನ್ ಆಂಟಿ ಪಕ್ಕದೂರಿನಲ್ಲಿದ್ದರು. ಅಮ್ಮನಿಗೆ ಹಾರ್ಟ್ ಪ್ರಾಬ್ಲಮ್ ಹೆಚ್ಚಾಗಿ ತೀರಿಕೊಳ್ಳುವ ಸಮಯ ಬಂದಾಗ ಡ್ರಾಮ ಕಂಪನಿಯವರು ಸರ್ಕಾರಿ ಆಸ್ಪತ್ರೆಗೆ ಸೇರಿಸಿ ಕೈ ತೊಳೆದುಕೊಂಡರು. ಅಮ್ಮನ ಮಾತಿಗೆ ಒಪ್ಪಿ, ಅಮ್ಮ ತೀರಿಕೊಂಡ ಮೇಲೆ ನಮ್ಮನ್ನು ತೆರೇಸಾ ಆಂಟಿಯೇ ಸಾಕಿ ಬೆಳೆಸಿದ್ದು. ಅಲ್ಲಿಯೂ ಕಡು ಬಡತನ. ನಾವಿಬ್ಬರೂ ಅವರ ಮನೆಕೆಲಸ, ಡ್ರಾಮ ಸ್ಕೂಲ್ ಕಸ ಗುಡಿಸಿಕೊಂಡೇ ಡ್ಯಾನ್ಸ್, ನಟನೆ ಎಲ್ಲಾ ಕಲಿಯುತ್ತಾ ಬೆಳೆದು ದೊಡ್ಡವರಾದೆವು. ನಂತರ ನಮ್ಮ ದಾರಿ ನಾವು ಹಿಡಿದು ಈ ಊರಿಗೆ ಬಂದು ಒಂದು ಡ್ರಾಮಾ ಕಂಪನಿಗೇ ಸೇರಿ ಅದನ್ನೇ ಮಾಡುತ್ತಾ ಹೋದೆವು. ಇನ್ನೇನು?' ಎಂದು ಸುಸ್ತಾದವಳಂತೆ ನಿಲ್ಲಿಸಿದಳು.

'ಮತ್ತೆ ನಿಮ್ಮಕ್ಕ ಅಂಚನಾ ದೊಡ್ಡ ಮಾಡೆಲ್ ಆದದ್ದು ಯಾವಾಗ? ನೀವೇಕೆ ಆಗಲಿಲ್ಲ?' ಕೀರ್ತಿಮಾನ್ ಅವರ ಹಿನ್ನೆಲೆಯನ್ನು ಮನಸ್ಸಿನಲ್ಲಿ ಹೆಣೆಯುತ್ತಿದ್ದಾನೆ.

ರಾಜೂ ಮೂರು ಕಪ್ ಚಹಾ ಮತ್ತು ಬಿಸ್ಕತ್ ತಂದು ಮುಂದಿಟ್ಟ.

'ಅಕ್ಕನಿಗೆ ಶಶಿಧರ್ ದೇಸಾಯಿ ನಾವು ಕ್ಲಿಯೋಪಾತ್ರ ನಾಟಕ ಮಾಡುತ್ತಿದ್ದಾಗ ಪರಿಚಯವಾದರು. ಅವರದೇ ಆದ ಮಾಡೆಲಿಂಗ್ ಕಂಪನಿಯೂ ಇದೆ. ನಾಟಕ ಪ್ರದರ್ಶನ ನೋಡಕ್ಕೆ ಬರ್ತಿದ್ದ ಭಾವ ಅವಳನ್ನು ಇಷ್ಟಪಟ್ಟರು, ಅವಳೂ ಕೂಡಾ. ನಾವು ದಿನದ ಒಂದೊಂದು ಪ್ರದರ್ಶನದಲ್ಲಿ ಒಬ್ಬೊಬ್ಬರು ಆ ಪಾತ್ರವನ್ನು ನಟಿಸಿ ಎಲ್ಲರಿಗೂ ನಾಯಕಿ ಒಬ್ಬಳೇ ಎಂಬಂತೆ ಬೇಸ್ತು ಬೀಳಿಸುತ್ತಿದ್ದೆವು ಆಗ. ಆಮೇಲಾಮೇಲೆ ನಾವು ಬೇರೆ ಬೇರೆ ಪಾತ್ರಗಳನ್ನೂ ಮಾಡುತ್ತಿದ್ದೆವು ಅನ್ನಿ. ಮೊದಮೊದಲು ಶಶಿಧರ್ ಭಾವನಿಗೂ

## ಇಲ್ಲಿಯವರೆಗೆ



ಕೋಟ್ಯಾಧೀಶ್ವರಿ ಅಂಚನಾ ದೇಸಾಯಿ ನೀರಿನಲ್ಲಿ ಮುಳುಗಿ ನಿಗೂಢ ರೀತಿಯಲ್ಲಿ ಸಾವನ್ನಪ್ಪುತ್ತಾಳೆ. ಜನಪ್ರಿಯ ನಟಿ ಮತ್ತು ಮಾಡೆಲ್ ತಾರೆಯಾದ ಅಂಚನಾ ಸಾವಿನ ಬಗ್ಗೆ ಪತ್ರಕರ್ತರು ಅಂಚನಾ ಪತಿ ಶಶಿಧರ್ ಅವರನ್ನು ಮಾತಿಗೆಳೆಯುತ್ತಾರೆ. ಆದರೆ ಆತ ಏನನ್ನೂ ಹೇಳುವ ಸ್ಥಿತಿಯಲ್ಲಿ ಇರುವುದಿಲ್ಲ. ಈ ಬಗ್ಗೆ ವಿನಯನಗರದ ಗ್ಲೋಬಲ್ ಇನ್ಶೂರೆನ್ಸ್ ಕಂಪೆನಿಯಲ್ಲಿ ಪತ್ತೇದಾರ ಕೀರ್ತಿಮಾನ್ ತನಿಖೆಗೆ ಆರಂಭಿಸುತ್ತಾನೆ.

ಆಕೆಯ ಹೆಸರಿನಲ್ಲಿದ್ದ ಐದು ಕೋಟಿ ಮೊತ್ತದ ಇನ್ಶೂರೆನ್ಸ್ ಹಣದ ನಾಮಿನಿ ಅಂಚನಾ ತಂಗಿ ಕಂಚನಾ (ಕಂಚಿ) ಹೆಸರಿನಲ್ಲಿರುತ್ತದೆ. ಈ ಮಧ್ಯೆ ಶವದ ಮರಣೋತ್ತರ ಪರೀಕ್ಷೆಯ ಫಲಿತಾಂಶಕ್ಕೆ ಎಲ್ಲರೂ ಕಾಯುತ್ತಾರೆ.